ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ:080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-560001,
ದಿನಾಂಕ:16.09.2017

ಸಂಖ್ಯೆ:ಕಾಶಿಇ/ಶೈವಿ/218/ಸ್ಕೌಟ್ಸ್ ಗೈಡ್ಸ್/2015-16

**ಅಧಿಕೃತ ಜ್ಞಾಪನ**

ವಿಷಯ: ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ವತಿಯಿಂದ ದಿನಾಂಕ:03.10.2017 ರಿಂದ 09.10.2017 ರವರೆಗೆ ಆಯೋಜಿಸಿರುವ ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ಸ್‌ಗಳ ಮೂಲ ತರಬೇತಿಗೆ ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರವರ ಕಛೇರಿ ಪತ್ರ ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ಸ್ಕೌವಿ/7909/2017-18 ದಿನಾಂಕ:08/09/2017.

* * * * * * * *

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕಡ್ಡಾಯವಾಗಿ ಭಾರತ್ ಸ್ಕೌಟ್ಸ್ & ಗೈಡ್ಸ್ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಈ ಘಟಕಗಳನ್ನು ನಿರ್ವಹಿಸಲು ತರಬೇತಿ ಪಡೆದ ಅಧ್ಯಾಪಕರುಗಳಿಗೆ ಜವಾಬ್ದಾರಿ ನೀಡಬೇಕಿರುತ್ತದೆ. ಕೆಲವು ಕಾಲೇಜುಗಳಲ್ಲಿ ಅಗತ್ಯ ತರಬೇತಿಯನ್ನು ಪಡೆಯದ ಅಧ್ಯಾಪಕರಿಗೆ ಈ ರೀತಿಯ ಜವಾಬ್ದಾರಿಗಳನ್ನು ವಹಿಸುತ್ತಿರುವುದನ್ನು ಗಮನಿಸಲಾಗಿದೆ.

ಈ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ವತಿಯಿಂದ ದಿನಾಂಕ:03.10.2017 ರಿಂದ 09.10.2017 ರವರೆಗೆ **ಕೊಂಡಜ್ಜಿ** ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ಸ್‌ಗಳ ಮೂಲ ತರಬೇತಿಗೆ, ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ತರಬೇತಿ ಪಡೆಯದೇ ಘಟಕಗಳನ್ನು ನಿರ್ವಹಿಸುತ್ತಿರುವ ಪುರುಷ ಅಧ್ಯಾಪಕರುಗಳನ್ನು ಸದರಿ ತರಬೇತಿಗೆ ಕಡ್ಡಾಯವಾಗಿ ನಿಯೋಜಿಸಲು ಸೂಚಿಸಲಾಗಿದೆ ಹಾಗೂ ಸದರಿ ಅವಧಿಗೆ ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ. ಈ ಸಂಬಂಧ ಉಲ್ಲೇಖಿತ ಪತ್ರವನ್ನು ಲಗತ್ತಿಸುತ್ತಾ ಪತ್ರದಲ್ಲಿ ತಿಳಿಸಿರುವ ಶುಲ್ಕಗಳನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಖಾತೆಯಿಂದ ಭರಿಸಲು ಸೂಚಿಸಲಾಗಿದೆ.

**ಅಡಕ: ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರವರ ಉಲ್ಲೇಖಿತ ಪತ್ರ.**

***ಕಾಲೇಜು ಶಿಕ್ಷಣ ಆಯುಕ್ತರು***

**ಇವರಿಗೆ;**

1) ಇಲಾಖಾವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ.
2) ಸರ್ಕಾರಿ ಪ್ರಥಮದರ್ಜೆ ಪ್ರಾಂಶುಪಾಲರುಗಳಿಗೆ- ಸದರಿ ತರಬೇತಿಗೆ ನಿಯೋಜಿತರಾಗುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

**ಪ್ರತಿಯನ್ನು:**

1) ರಾಜ್ಯ ಮುಖ್ಯ ಆಯುಕ್ತರು, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, ನಂ.39, "ಶಾಂತಿಗೃಹ", ಅರಮನೆ ರಸ್ತೆ, ಬೆಂಗಳೂರು-560001.
2) ಶ್ರೀ ಶ್ರೀಕಾಂತ, ಸಮನ್ವಯಾಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು.
3) ಕಛೇರಿ ಪ್ರತಿ.

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

**ವಿ.ಪಿ.ದೀನದಯಾಳು ನಾಯ್ಡುರವರಜನ್ಮ ಶತಮಾನೋತ್ಸವ**

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: shq@bsgkarnataka.org / shantigruha@bsgkarnataka.orgಅಂತರ್ಜಾಲ: www.bsgkarnataka.org


ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ಸ್ಕೌ.ವಿ/ 7909 /2017–18 ದಿನಾಂಕ: 08.09.2017

ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ:-ರಾಜ್ಯಮಟ್ಟದ ರೋವರ್ಸ್ ಸ್ಕೌಟ್ಸ್ ಲೀಡರ್ಸ್ ಮೂಲ ತರಬೇತಿ ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತು

ಮೇಲ್ಕಂಡ ಶಿಬಿರದ ವಿವರಗಳು ಈ ಕೆಳಕಂಡಂತಿವೆ :

| | | |
|---|---|---|
| 1 | ಸ್ಥಳ | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ & ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ |
| 2 | ದಿನಾಂಕ | 03.10.2017 ರಿಂದ 09.10.2017ರವರೆಗೆ |
| 3 | ಹಾಜರಾಗುವ ದಿನಾಂಕ | 03.10.2017 ಬೆಳಗ್ಗೆ 9.00 ಗಂಟೆಗೆ, ತಡವಾಗಿ ಬಂದವರನ್ನು ಸೇರಿಸಲಾಗುವುದಿಲ್ಲ. |
| 4 | ಬಿಡುಗಡೆ ದಿನಾಂಕ | 09.10.2017 ಸಂಜೆ 4 ಗಂಟೆಗೆ |
| 5 | ನೊಂದಾವಣಿ ಶುಲ್ಕ | ತಲಾ ರೂ.25/- |
| 6 | ದಳ ನೊಂದವಣಿ ಶುಲ್ಕ | ರೋವರ್ ಸ್ಕೌಟ್ ಘಟಕಕ್ಕೆ ವಾರ್ಷಿಕ ರೂ.194/- ಸ್ಕೌಟ್ ಮತ್ತು ಗೈಡ್ ಮಾಸಿಕ ವಾರ್ತಾ ಪತ್ರಿ ಚಂದಾದಾರರ ಶುಲ್ಕ ರೂ.100/- ಒಂದು ವರ್ಷಕ್ಕೆ. |
| 7 | ಯಾರು ಭಾಗವಹಿಸಬಹುದು | ಪದವಿ ಪೂರ್ವ ಮತ್ತು ಪ್ರಥಮ ದರ್ಜೆ ಕಾಲೇಜುಗಳ ಪುರುಷ ಉಪನ್ಯಾಸಕರು ಭಾಗವಹಿಸಬೇಕು. |
| 8 | ಸಮವಸ್ತ್ರ | ಸಮವಸ್ತ್ರಕ್ಕೆ ಕಾಲೇಜುಗಳ ಸಂಚಿತನಿಧಿಯಿಂದ ರೂ.1500/- ಭರಿಸಬಹುದು. ಸಮವಸ್ತ್ರ ವಿನ್ಯಾಸ ಮತ್ತು ದೊರೆಯುವ ಸ್ಥಳ ಮುಂತಾದ ವಿವರಗಳನ್ನು ನಿಮ್ಮ ಭಾರತ್ ಸ್ಕೌಟ್ಸ್ ಮ ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಪಡೆಯಲು ಕೋರಿದೆ. ಹೆಚ್ಚಿನ ವಿವರಗಳಿಗೆ ಕಛೇ ದೂರವಾಣಿ ಸಂಖ್ಯೆ :080-22260017 ಗೆ ಸಂಪರ್ಕಿಸಿರಿ. ಶಿಬಿರಕ್ಕೆ ಸಮ ಕಡ್ಡಾಯವಾಗಿರಲೇಬೇಕು. |
| 9. | ಪ್ರಯಾಣ ವೆಚ್ಚ | ಕಾಲೇಜಿನಿಂದ ಶಿಬಿರ ನಡೆಯುವ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಕಾಲೇಜಿನ ರೋವರ್ ನಿಧಿಯಿಂದ ಭರಿಸುವುದು. |
| 10 | ಊಟ ಮತ್ತು ವಸತಿ | ರಾಜ್ಯ ಸಂಸ್ಥೆವತಿಯಿಂದ ಊಟ ಮತ್ತು ವಸತಿ ಸೌಕರ್ಯವನ್ನು ಏರ್ಪಡಿಸಿದೆ. |
| 11 | ತರಬೇಕಾದ ವಸ್ತುಗಳು | ಸಮವಸ್ತ್ರ, ಬದಲಾಯಿಸಲು ಉಡುಪು, ಲಘು ಹಾಸಿಗೆ, ತಟ್ಟೆ, ಲೋಟ, ಲೇಖನ ಸಾಮಗ್ರಿಗ ಮೂರು ಮೀಟರ್ ಗಂಟಿನ ಹಗ್ಗ (ಕಾಟನ್ ರೋಪ್) ಮತ್ತು ಇತರೆ ಶಿಬಿರಕ್ಕೆ ಬೇಕಾಗ ಹಾಗೂ ವೈಯುಕ್ತಿಕ ವಸ್ತುಗಳು. |
| 12. | ಭಾಗವಹಿಸುವ ಜಿಲ್ಲೆಗಳು | ರಾಜ್ಯದ ಪ್ರತೀ ಜಿಲ್ಲೆಯಿಂದ ಅಭ್ಯರ್ಥಿಗಳನ್ನು ನಿಯೋಜಿಸಲು ಕೋರಿದೆ. |
| 13 | ನೊಂದಾಯಿಸಲು ಕಡೆ ದಿನಾಂಕ | 25.09.2017 |
| 14 | ಶಿಬಿರವನ್ನು ತಲುಪುವ ವಿಧಾನ | ದಾವಣಗೆರೆ ಹೊಂಡ ವೃತ್ತದಿಂದ ಅನೇಕ ಬಸ್ಸುಗಳು ಹಾಗೂ ಆಟೋಗಳು ಕೊಂಡಜ್ಜಿ ಹೊರಡುತ್ತವೆ. ಅಥವಾ ತಾವು 3 -4 ಅಭ್ಯರ್ಥಿಗಳು ಒಂದುಗೂಡಿ ಆಟೋಗಳಲ್ಲಿ ತರಬೇ ಕೇಂದ್ರವನ್ನು ತಲುಪುವುದು. |

ನೊಂದಾವಣಿ ಶುಲ್ಕ, ದಳ ನೊಂದಾವಣಿ ಶುಲ್ಕ ಮತ್ತು ಸ್ಕೌಟ್ ಗೈಡ್ ಮಾಸ ಪತ್ರಿಕೆ ವಾರ್ಷಿಕ ಚಂದಾಹಣವನ್ನು ಆಯಾ ಕಾಲೇಜಿನ ಚಾಲ್ತಿ ಅಥವ ಸಂಚಿತ ನಿಧಿಯಿಂದ ಸರ್ಕಾರಿ ಆದೇಶದಂತೆ ಭರಿಸಲು ಅನುಮತಿ ನೀಡಲು ಕೋರಿದೆ.